

# ಕಂಚಿ ಸೀರೆ

## ಮಾರುಹೋಗದೆ ಇರುವಳೆ ನೀರೆ?

**ಕಾಂಜೀವರಂ ರೇಷ್ಮೆ ಸೀರೆಯ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಎಂದಿಗೂ ಔಟ್‌ಡೇಟೆಡ್ ಎನಿಸಿದ ಕಂಚಿ ಸೀರೆಗಳು ಫ್ಯಾಷನ್ ಪ್ರಪಂಚದಲ್ಲಿ 'ಎವರ್‌ಗ್ರೀನ್'ನಂತೆ ಮೆರೆಯುತ್ತಿವೆ. ಕಂಚಿ ಸೀರೆ ಮಹಿಳೆಯರನ್ನು ಇಷ್ಟೊಂದು ಸೆಳೆಯಲು ಕಾರಣವಾದರೂ ಏನು?**

■ **ಪದ್ಮಾಮೂರ್ತಿ, ಅರಸೀಕೆರೆ**

ರೇಷ್ಮೆ ಸೀರೆಯನ್ನು ಮೆಚ್ಚದ ಮಹಿಳೆಯರು ಯಾರಿದ್ದಾರೆ ಹೇಳಿ? ಉಟ್ಟರೆ ಕಳೆಕಳೆಯಾಗಿ ಕಾಣುವ, ಶ್ರೀಮಂತ ನೋಟ ನೀಡುವ, ವಿಭಿನ್ನ ಮೆರುಗು ಕೊಡುವಂಥ ರೇಷ್ಮೆ ಸೀರೆಯ ಚೆಲುವಿಗೆ ಮನಸೋಲದ ಮಹಿಳೆಯರು ಇಲ್ಲವೇ ಇಲ್ಲ ಎನ್ನಬಹುದು. ಸಾಂಪ್ರದಾಯಿಕತೆಗೆ ಮತ್ತೊಂದು ಹೆಸರೇ ರೇಷ್ಮೆ ಸೀರೆ. ಗೌರಿ– ಗಣೇಶ, ನವರಾತ್ರಿ– ಶಿವರಾತ್ರಿ, ಹೋಳಿ–ದೀಪಾವಳಿ... ಹೀಗೆ ಯಾವುದೇ ಹಬ್ಬವಿರಲಿ, ರೇಷ್ಮೆ ಸೀರೆಗೆ ಉಡುಪುಗಳಲ್ಲೇ 'ರಾಣಿ'ಯ ಪಟ್ಟ.

ರೇಷ್ಮೆ ಸೀರೆ ಎಂದಾಕ್ಷಣ ಮೈಸೂರು ರೇಷ್ಮೆಯನ್ನು ನೆನೆಸಿಕೊಳ್ಳುವವರೇ ಹೆಚ್ಚು ಮಂದಿ. ಇದರ ಜೊತೆಗೆ ರೇಷ್ಮೆಯಲ್ಲೇ ಮಹಾರಾಣಿಯಂತೆ ಮೆರೆಯುವ ಮತ್ತೊಂದು ವೈವಿಧ್ಯವಿದೆ. ಅದೇ ಕಾಂಜೀವರಂ ರೇಷ್ಮೆ ಸೀರೆ. ಮದುವೆ, ಮುಂಜಿ ಮುಂತಾದ ಶುಭ ಸಮಾರಂಭದಲ್ಲಿ ಕಾಂಜೀವರಂ ಸೀರೆಗೇ ಅಗ್ರಪಟ್ಟ. ರೇಷ್ಮೆಯಲ್ಲಿ ಬನಾರಸಿ, ಚಾಂದೇರಿ, ಬಾಗಲ್ಪುರಿ, ಅಸ್ಸಾಂ ಸಿಲ್ಕ್, ಬೊಮ್ಕಾಯ್ ಮುಂತಾದ ಸೀರೆಗಳು ಬಣ್ಣದಲ್ಲಿ, ವೈವಿಧ್ಯದಲ್ಲಿ, ವಿನ್ಯಾಸದಲ್ಲಿ ಪೈಪೋಟಿ ನೀಡುತ್ತಿದ್ದರೂ ಎಲ್ಲ ಸೀರೆಗಳಿಗೂ ಮೇಲ್ಪಂಕ್ತಿ ಹಾಕುವುದು ಕಾಂಜೀವರಂ ಸೀರೆಯೇ.

ಮದುವೆ, ಮುಂಜಿ ನಿಶ್ಚಯವಾಗುತ್ತಿದ್ದಂತೆ, ಮನೆಯಲ್ಲಿ ಮಹಿಳೆಯರಿಗೆ ಮದುವೆಗೆ ಮೊದಲು ಯೋಚನೆ ಬರುವುದೇ ಸೀರೆ ಖರೀದಿ ಬಗ್ಗೆ, ಒಡವೆ ಕೊಳ್ಳುವ ಬಗ್ಗೆ.

ಮದುವೆ ಸೀರೆಗಳಲ್ಲಂತೂ ಕಾಂಜೀವರಂ ಅಥವಾ ಕಂಚಿ ಸೀರೆಗಳಿಗೆ ಸರಿಗಟ್ಟುವ ಸೀರೆಗಳು ವಿರಳ ಎಂದೇ ಹೇಳಬಹುದು. ಕಂಚಿ ಸೀರೆ ಎಂದರೆ ಭಾರವಾದ ಸೀರೆ ಎಂಬ ಮನೋಭಾವನೆ ಹಿಂದೆ ಇತ್ತು. ಆದರೆ ಈಗ ಇದರಲ್ಲೂ ಹಗುರವಾದ, ಆಕರ್ಷಕ ವಿನ್ಯಾಸಗಳ, ಕಡು ಬಣ್ಣದ ಸೀರೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, 'ಎವರ್‌ಗ್ರೀನ್ ಹೀರೊ'ನಂತೆ ಕಂಗೊಳಿಸುತ್ತಿವೆ. ಅಲ್ಲದೆ ಫ್ಯಾನ್ಸಿ ಡಿಸೈನ್ ಸೀರೆಗಳೂ ಕಂಚಿಯಲ್ಲಿ ಲಭ್ಯ ಎಂಬುದು ಆಧುನಿಕ ಮನೋಭಾವದ ಮಹಿಳೆಯರ ಸೀರೆ ಆಸೆಯನ್ನು ಮತ್ತಷ್ಟು ಹುರಿದುಂಬಿಸಿದೆ.